ಸಿ.ಸಿ. ನಂ. 324 -2012 PW-2.

ದಿನಾಂಕಃ 13-07-2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ . ವಕೀಲರಿಂದಃ

10. ಪ್ರ.ವ.ವರದಿಯಲ್ಲಿ ಪಂಚರ ಹೆಸರುಗಳು ನಮೂದಾಗಿಲ್ಲ ಎಂದರೆ ಸರಿ. ಸದ್ರಿ ಅಂಶವನ್ನು ನಮೂದು ಮಾಡಲು ಪ್ರ.ವ.ವರದಿಯಲ್ಲಿ ಜಾಗ ಇರಲಿಲ್ಲ. ಬರೆಯಲು ಜಾಗ ಇಲ್ಲದೇ ಇದ್ದರೂ ಪ್ರತ್ಯೇಕ ಹಾಳೆಯನ್ನು ಹಾಕಿ ಬರೆಯ ಬಹುದು ಎಂದರೆ ಸರಿ. ಆ ರೀತಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ಯಾವ ಯಾವ ಪಂಚನಾಮೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಬರೆಯಲಾಗಿದೆ ಎಂದು ನಿಪಿ 1 ರಲ್ಲಿ ನಿಖರವಾಗಿ ಬರೆಯಲಾಗಿದೆ. ಸದ್ರಿ ಪಂಚನಾಮೆಯನ್ನು ಬೇರೆ ಬೇರೆ ಸಮಯದಲ್ಲಿ ಮುಂದುವರೆದು ಬರೆದಿರುತ್ತೇವೆ. ಯಾವ ಯಾವ ಭಾಗವನ್ನು ಯಾವ ಯಾವ ಸಮಯದಲ್ಲಿ ಬರೆಯಲಾಗಿದೆ ಎಂದು ನಮೂದಿಸಿಲ್ಲ. ಪಂಚನಾಮೆಯಲ್ಲಿ ಪಂಚರು ಒಂದು ಜಾಗದಲ್ಲಿ ಸಹಿ ಮಾಡಿರುತ್ತಾರೆ. ಸಹಿಯ ಕೆಳಗೆ ಪಂಚರ ಹೆಸರುಗಳನ್ನು ಬರೆದಿಲ್ಲ. ನಿಪಿ 1 ರಲ್ಲಿ ಮೊದಲೀನಿಂದ ಕೊನೆಯವರೆಗೂ ಒಂದೇ ತರಹದ ಹಸ್ತಾಕ್ಷರ ಇದೆ ಎಂದರೆ ಸರಿ.

11. ಜೀಪನ ಚಾವಿಯನ್ನು ಅಂದಾಜಿನ ಮೇಲೆ ಕಾರಿಗೆ ಹಾಕಿರುತ್ತೇವೆ. ಒಂದು ವಾಹನದ ಚಾವಿ ಮತ್ತೊಂದು ವಾಹನಕ್ಕೆ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಒಂದು ವಾಹನದ ಚಾವಿ ಬೇರೆ ವಾಹನಗಳಿಗೆ ಹೊಂದುತ್ತಿದ್ದಲ್ಲಿ ಅನೇಕ ವಾಹನಗಳು ಕಳುವು ಆಗುವ ಸಾಧ್ಯತೆ ಇರುತ್ತಿತ್ತು ಎಂದರೆ ಸರಿ. ಸದ್ರಿ ಚಾವಿಯನ್ನು ಜಪ್ತು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸದ್ರಿ ಚಾವಿಯ ವಿವರಗಳನ್ನು ಪಂಚನಾಮೆಯಲ್ಲಿ ಬರೆದಿಲ್ಲ.

12. 1 ನೇ ಆರೋಪಿಯು ಮನೆಯ ಮುಂಭಾಗದಲ್ಲಿ ನಿಂತಿರುವಾಗ ರಾತ್ರಿ ಸುಮಾರು 9-45 ಗಂಟೆಗೆ ಅವರಿಗೆ ವಿಷಯವನ್ನು ಚಾಸಾ 1 ರವರು ತಿಳಿಸಿರುತ್ತಾರೆ. ನಮ್ಮ ಜೀಪನ್ನು ಮುಖ್ಯ ರಸ್ತೆಯಲ್ಲಿಯೇ ನಿಲ್ಲಿಸಿರುತ್ತೇವೆ. ಜೀಪನ್ನು ನಿಲ್ಲಿಸಿದ್ದ ಸ್ಥಳದಿಂದ 1 ನೇ ಆರೋಪಿಯ ಮನೆಯು 800 ಮೀಟರ ದಿಂದ 1 ಕಿಲೋ ಮೀಟರ ಅಂತರದಲ್ಲಿದೆ. ಜೀಪನಿಂದ ಇಳಿದು ನಡೆದು ಕೊಂಡು ಹೋಗಿರುತ್ತೇವೆ. ಸುಮಾರು 50 ಮೀಟರ ದೂರದಿಂದ ನಮಗೆ 1 ನೇ ಆರೋಪಿಯ ಮನೆ ಕಾಣಿಸಿರುತ್ತದೆ. ನಮ್ಮನ್ನು 1 ನೇ ಆರೋಪಿಯು ಓಡಿ

ಹೋಗಲು ಪ್ರಯತ್ನಿಸಿರುವುದಿಲ್ಲ. ನಾವು ಹೋದ ಮನೆ 1 ನೇ ಆರೋಪಿಗೆ ಸೇರಿದ್ದ ಮನೆಯಾಗಿರುತ್ತದೆ. ಸದ್ರಿ ಮನೆಯ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ. ಸದ್ರಿ ಮನೆಯಲ್ಲಿ 3 ಕೋಣೆಗಳು ಇದ್ದವು.

13. 1 ನೇ ಆರೋಪಿಯ ಮನೆಯಿಂದ ಮಾಂಸವನ್ನು ಹೂತು ಹಾಕಿದ ಸ್ಥಳ ಪೂರ್ವ ದಿಕ್ಕಿಗೆ 100 ರಿಂದ 150 ಮೀಟರ ದೂರದಲ್ಲಿತ್ತು. ಸದ್ರಿ ಸ್ಥಳ 1 ನೇ ಆರೋಪಿಯ ಅತಿಕ್ರಮಣ ಜಾಗವಾಗಿರುತ್ತದೆ ಸದ್ರಿ ಸ್ಥಳದ ಸರ್ವೆ ಸಂಖ್ಯೆ ನನಗೆ ಹೇಳಲವು ಆಗುವುದಿಲ್ಲ. ಅದು ಸುಮಾರು 1 ಅಡಿ ಆಳ , 7 ರಿಂದ 8 ಅಡಿ ಅಗಲದ ಗುಂಡಿಯಾಗಿರುತ್ತದೆ. ಗುಂಡಿಯನ್ನು ಮಣ್ಣಿನಿಂದ ಮುಚ್ಚಲಾಗಿರುತ್ತದೆ. ಅರ್ಧ ಅಡಿ ಎತ್ತರದಲ್ಲಿ ಮಣ್ಣನ್ನು ಹಾಕಿರುತ್ತಾರೆ. ಸದ್ರಿ ಮಣ್ಣನ್ನು ವಾಚಮನ್ ರವರು ಸಲಕೆಯಿಂದ ತೆಗೆದಿರುತ್ತಾರೆ. ಆ ಸಮಯದಲ್ಲಿ ಪೋಟೋವನ್ನು ತೆಗೆದಿರುತ್ತೇವೆ. ಸದ್ರಿ ವಾಚಮನ್ ರವರ ಹೆಸರನ್ನು ಹೇಳಲು ಆಗುವುದಿಲ್ಲ. ಸದ್ರಿ ವಿವರವನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಹೊಟ್ಟೆಯ ಭಾಗ ಮತ್ತು ಚರ್ಮ ಮತ್ತು ಉಳಿದ ಮಾಂಸವನ್ನು ಅಳತೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ಸದ್ರಿ ವಿಷಯವನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಈ ಎಲ್ಲಾ ಪ್ರಕ್ರಿಯೇ ಆಗಲು ಸುಮಾರು ಒಂದೂವರೆ ಗಂಟೆ ತಗಲಿರುತ್ತದೆ. ಸದ್ರಿ ಸ್ಥಳದಿಂದ ಸುಮಾರು 20 ಮೀಟರ ದೂರದಲ್ಲಿ ಕಾಡುಕೋಣದ ತಲೆ ಕುರುಚಲ ಗಿಡ ಪೊದೆಗಳ ಮಧ್ಯದಲ್ಲಿ ಅಡಗಿಸಿ ಇಟ್ಟಿರುತ್ತಾರೆ. ಸದ್ರಿ ಜಾಗ ಅರಣ್ಯ ಇಲಾಖೆಗೆ ಸೇರಿರುತ್ತದೆ. ಸದ್ರಿ ಸ್ಥಳದ ಸರ್ವೆ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ಪೋಟೋವನ್ನು ತೆಗೆದಿಲ್ಲ. ಪೊದೆಗಳಿಂದ ಬಂದ 2-3 ನಿಮಿಷಗಳ ನಂತರ ಪೋಟೋವನ್ನು ತೆಗೆದಿರುತ್ತೇವೆ. ಪೊದೆಗಳ ಮಧ್ಯದಲ್ಲಿರುವ ತಲೆಯ ಪೋಟೋವನ್ನು ತೆಗೆಯಲು ಯಾವುದೇ ತೊಂದರೆ ಇರಲಿಲ್ಲ. ತಲೆಯ ಕೊಂಬಿನ ಅಳತೆಯನ್ನು ಮಾಡಿರುತ್ತೇವೆ. ಸಂಪೂರ್ಣದ ತಲೆಯ ಭಾಗದ ಅಳತೆಯನ್ನು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸದ್ರಿ ಅದನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಕಾಣುಕೋಣದ ಕುತ್ತಿಗೆಯ ಭಾಗದಿಂದ ಮೇಲಿನ ತಲೆಯ ಭಾಗವನ್ನು ಅಡಗಿಸಿ ಇಟ್ಟಿರುತ್ತಾರೆ. ಸದ್ರಿ ತಲೆಯ ಭಾಗದ ಸ್ಥಿತಿಯನ್ನು ಪಂಚನಾಮೆಯಲ್ಲಿ ನಮೂದಿಸಿಲ್ಲ.

14. ಕಾಡುಕೋಣವನ್ನು ಸಾಯಿಸಲು ಉಪಯೋಗಿಸಿದ ತಂತಿಯ ಉದ್ದ ಮತ್ತು ಗಾತ್ರವನ್ನು ಹೇಳಲು ಆಗುವುದಿಲ್ಲ. ಸದ್ರಿ ತಂತಿಯು ಸುಮಾರು 3 ಮೀಟರ ಉದ್ದ ಇತ್ತು. ಸದ್ರಿ ತಂತಿಯನ್ನು ಜಪ್ತು ಪಡಿಸಿಕೊಂಡ ಬಗ್ಗೆ

ಪಂಚನಾಮೆಯಲ್ಲಿ ಬರೆದಿಲ್ಲ. ಯಾವ ಲೋಹದ ತಂತಿಯಾಗಿತ್ತು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ತಂತಿಯನ್ನು ಕಟ್ಟಿರುವುದರಿಂದ ಮರದಲ್ಲಿ ಕುರುಹುಗಳು ಕಂಡು ಬಂದಿರುತ್ತವೆ. ಯಾವ ಮರಕ್ಕೆ ತಂತಿಯನ್ನು ಕಟ್ಟಲಾಗಿರುತ್ತದೆ ಎಂದು ಪಂಚನಾಮೆಯಲ್ಲಿ ನಮೂದಿಸಿದ್ದೇವೆ. ಸದ್ರಿ ಮರದ ಪೋಟೋವನ್ನು ತೆಗೆದಿಲ್ಲ. ಮರದ ಗಾತ್ರ, ನೆಲದಿಂದ ಎಷ್ಟು ಎತ್ತರದಲ್ಲಿ ತಂತಿಯನ್ನು ಕಟ್ಟಲಾಗಿತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ. ಮಾಂಸವನ್ನು ಹೂತ ಹಾಕಿದ್ದ ಸ್ಥಳದಿಂದ ಸುಮಾರು 4-5 ಮೀಟರ ದೂರದಲ್ಲಿ ತಂತಿಯನ್ನು ಕಟ್ಟಲಾಗಿತ್ತು. ಕಾಡುಕೋಣವನ್ನು ಸಾಯುವ ಪೂರ್ವದಲ್ಲಿ ಒದ್ದಾಡಿದ ಕುರುಹುಗಳು ಕಂಡು ಬಂದಿರುತ್ತದೆ. ಸದ್ರಿ ಕುರುಹುಗಳ ಅಳತೆಗಳನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಸದ್ರಿ ಸ್ಥಳದ ಪೋಟೋವನ್ನು ತೆಗೆದುಕೊಂಡಿಲ್ಲ. ತಲೆಯ ಭಾಗದ ಮೇಲೆ ತಂತಿಯಿಂದ ಉರಳು ಹಾಕಿದ ಬಗ್ಗೆ , ಮಾಂಸ ತಯಾರಿಸಿದ್ದರಿಂದ ಕಂಡು ಬಂದಿರುರುವುದಿಲ್ಲ. ಮಣ್ಣಿನಲ್ಲಿ ಹೂತುಹಾಕಿದ್ದರಿಂದ ತಲೆಯಲ್ಲಿ ಮಣ್ಣು ತಾಗಿರುವುದು ಕಂಡು ಬಂದಿರುತ್ತದೆ. ಸದ್ರಿ ಅಂಶವನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಬರೆಯಲು ಯಾವುದೇ ತೊಂದರೆ ಇರಲಿಲ್ಲ. ತಲೆಯನ್ನು ಪಂಚನಾಮೆಯ ಮೂಲಕ ಜಪ್ತು ಮಾಡಿರುತ್ತೇವೆ. ಉಳಿದ ಭಾಗದ ಮಾಂಸವನ್ನು ಸ್ಥಳದಲ್ಲಿ ಬಿಟ್ಟು ಬಂದಿರುತ್ತೇವೆ. ಮಾಂಸವನ್ನು ಜಪ್ತುಪಡಿಸಿಕೊಂಡ ನಂತರ ನಾಶ ಪಡಿಸಲು ಆದೇಶವನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಎಷ್ಟು ಮಾಂಸವನ್ನು ಬಿಟ್ಟು ಬಂದಿರುತ್ತೇವೆ ಎಂದು ನ್ಯಾಯಾಲಯಕ್ಕೆ ತಿಳಿಸಿಲ್ಲ. ಪಂಚನಾಮೆಯಲ್ಲಿ ನಿಖರವಾಗಿ ತಿಳಿಸಿಲ್ಲ.

15. ನಿಪಿ 8 ರಿಂದ ನಿಪಿ 25, 28 ರಿಂದ 30 ರ ಪೋಟೊಗಳಲ್ಲಿ ಸಿಬ್ಬಂದಿಗಳಾಗಲಿ ಅಥವಾ ಪಂಚರಾಗಲಿ ಇರುವುದು ಕಂಡು ಬಂದಿರುವುದಿಲ್ಲ. ನಿಪಿ 8 ಮತ್ತು 10 ರಲ್ಲಿ ಪ್ಲಾಸ್ಟಿಕ ಚೀಲದಲ್ಲಿ ತುಂಬಿರುವ ಅಂಶವನ್ನು ಪಂಚನಾಮೆಯಲ್ಲಿ ಬರೆದಿಲ್ಲ. ಜೀಪನ ಚಾವಿಯನ್ನು ಕಾರಿಗೆ ಹಾಕಿರುವುದನ್ನು ತೋರಿಸಲು ಯಾವುದೇ ಪೋಟೋವನ್ನು ತೆಗೆದಿರುವುದಿಲ್ಲ. ನಾವು ಹಾಜರುಪಡಿಸಿದ ಪೊಟೋಗಳಲ್ಲಿ ತಂತಿ ಜಪ್ತು ಮಾಡಿದ ಬಗ್ಗೆ ಇರುವುದಿಲ್ಲ. ವಶಪಡಿಸಿಕೊಂಡ ತಲೆಯ ಯಾವ ಸ್ಥಿತಿಯಲ್ಲಿತ್ತು ಎಂದು ನಮೂದಿಸಿಲ್ಲ.

16. ನಾವು ಹೇಳಿದ ದಿನದಲ್ಲಿ 2 ನೇ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ, ಯಾವುದೇ ವಿಷಯಗಳನ್ನು

ತಿಳಿಸಿಲ್ಲ, ಯಾವುದೇ ಮಾಂಸ ಹಾಗೂ ಪಾತ್ರೆಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ನಾನು ಹೇಳಿದ ಸ್ಥಳಗಳಲ್ಲಿ ಪಂಚನಾಮೆಯನ್ನು ಜರುಗಿಸಿ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಜಪ್ತು ಪಡಿಸಿಕೊಂಡ ವಸ್ತುಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಪ್ರ.ವ.ವರದಿಯನ್ನು ಸೃಷ್ಟಿಸಿಕೊಂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 ರಿಂದ 6 ನೇ ಆರೋಪಿತರ ಪರ ಶ್ರೀ. ಆರ್.ವಿ.ಜಿ ವಕೀಲರಿಂದಃ

2 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ. ಮುಂದುವರೆದು 4 ರಿಂದ 6 ನೇ ಆರೋಪಿತರು ನಂದಿಗದ್ದೆ ಗ್ರಾಮದವರು ಎಂದರೆ ಸರಿ. ಸದ್ರಿ ಅವರಿಗೆ ಸ್ವಂತ ಮನೆ ಹಾಗೂ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಆದರಿಂದ ಒಳೆಯ ಆದಾಯವನ್ನು ಹೊಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದ್ರಿ ಬೀಟನಲ್ಲಿ ನಾನು ಹೆಚ್ಚಿನ ಸಮಯಲ್ಲಿ ಗಸ್ತಿನಲ್ಲಿ ಹೋಗಿರುತ್ತೇನೆ ಎಂದರೆ ಸರಿ. ಸದ್ರಿ ಗ್ರಾಮದ ಎಲ್ಲಾ ವ್ಯಕ್ತಿಗಳು ನನಗೆ ಪರಿಚಯ ಇರುತ್ತಾರೆ ಎಂದರೆ ಸರಿ. ಯಾವ ವ್ಯಕ್ತಿಗಳು ಎಲ್ಲ ಕೆಲಸ ಮಾಡುತ್ತಾರೆಂದು ನನಗೆ ಗೊತ್ತು. ಪರಿಸರಕ್ಕೆ ಸಂಬಂಧಿಸಿದ ಸಭೆಗಳನ್ನು ಗ್ರಾಮ ಅರಣ್ಯ ಸಮಿತಿ ಹಾಗೂ ಗ್ರಾಮಸ್ಥರ ಸಹಕಾರದಿಂದ ಮಾಡುತ್ತೇವೆ ಎಂದರೆ ಸರಿ. 5 ನೇ ಆರೋಪಿಯ ಮನೆಯ ಚೆಕ್ಕ ಬಂದಿಯನ್ನು ಬರೆದಿಲ್ಲ. ಮುದ್ದೆ ಮಾಲುಗಳು ಮನೆಯ ಯಾವ ಭಾಗದಲ್ಲಿ ಸಿಕ್ಕಿರುತ್ತವೆ ಎಂದು ಪಂಚನಾಮೆಯಲ್ಲಿ ಬರೆದಿಲ್ಲ. 5 ನೇ ಆರೋಪಿಯು ಓಡಿ ಹೋಗಿರುತ್ತಾನೆ ಎಂದು ಕಟ್ಟು ಕತೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

2. 6 ನೇ ಆರೋಪಿಯು ಮುಂಬೈಯಲ್ಲಿ ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಹಾಗಾಗಿ ಅವರು ಸಭೆಗಳಲ್ಲಿ ಪಾಲಗೊಳ್ಳುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಇಲಾಖೆಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. 6 ನೇ ಆರೋಪಿಯ ಮೇಲೆ ಈ ಹಿಂದೆ ಪ್ರಕರಣವನ್ನು ದಾಖಲಿಸಿದ್ದು, ಸದ್ರಿ ದ್ವೇಷದಿಂದ ಪ್ರಸ್ತುತ ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. 6 ನೇ

ಆರೋಪಿಯ ಹೆಸರನ್ನು ಹಾಳು ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. 4 ರಿಂದ 6 ನೇ ಆರೋಪಿತರು ಹಾಗೂ ಈ ಪ್ರಕರಣಕ್ಕೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.,ದಾಂಡೇಲಿ